ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇವತ್ತು ರೈತರಿಗೆ ಆಗಿರತಕ್ಕಂಥ ತೊಂದರೆ ರೈತರು ಈ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. .....

ಅಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ನೀಡುವ ಉತ್ತರಗಳ ಪಟ್ಟಿಯನ್ನು ಮುಂದೆ ಮಂಡಿಸುತ್ತೇನೆ.

ವಿದ್ಯುತ್ ಯೂನಿಟ್‌ಗಳ ಉತ್ಪಾದನೆ

44 - ಶ್ರೀ ಕೆ. ಲಕ್ಷ್ಮಣ್ (ರಾಜಾಜಿನಗರ) ; ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ವಿದ್ಯುತ್ ಯೂನಿಟ್‌ಗಳಿಗೆ ಬೇಡಿಕೆಯಿದೆ?

ಆ) ನಮ್ಮ ರಾಜ್ಯದಲ್ಲಿ ಎಷ್ಟು ವಿದ್ಯುತ್ ಯೂನಿಟ್‌ಗಳ ಉತ್ಪಾದನೆಯಾಗುತ್ತಿದೆ?

ಇ) ಈ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಕರ್ನಾಟಕ ರಾಜ್ಯದಲ್ಲಿ ಸರಾಸರಿ ಪ್ರತೀದಿನ ವಿರುವ ವಿದ್ಯುತ್ ಬೇಡಿಕೆಯ ಪ್ರಮಾಣ 56.5 ದಶಲಕ್ಷ ಯೂನಿಟ್‌ಗಳು.

ಆ) ರಾಜ್ಯದಲ್ಲಿ ಸರಾಸರಿ ಪ್ರತೀದಿನ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ 40 ದಶಲಕ್ಷ ಯೂನಿಟ್‌ಗಳು.

ಇ) ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ವಿದ್ಯುತ್ ಪಾಲನ್ನು ಪಡೆಯಲಾಗತ್ತದೆ.

2) ಹೊಸ ವಿದ್ಯುತ್ ಉತ್ಪಾದನೆ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ.

3) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ನಗರದ ಸಮೀಪ ಇರುವ ಯಲಹಂಕದಲ್ಲಿ 127.92 ಮೇ.ವಾ. ಸಮಾರ್ಥ್ಯದ ಡೀಸೆಲ್ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ನಿರ್ಮಿಸುತ್ತಿದೆ.

ರಾಜಾಜಿನಗರ ಸಹಕಾರ ಸಂಸ್ಥೆಯಲ್ಲಿ ಹೂಡಿರುವ ಮೂಲಧನ

45 - ಶ್ರೀ ಕೆ. ಲಕ್ಕಪ್ಪ (ರಾಜಾಜಿನಗರ) : ಮಾನ್ಯ ಸಹಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಸಹಕಾರ ಸಂಸ್ಥೆಯು ಹೂಡಿರುವ ಮೂಲ ಧನವೆಷ್ಟು?

ಆ) ಹಾಗಿದ್ದಲ್ಲಿ ಸಂಸ್ಥೆಯವರು ಕೊಟ್ಟಿರುವ ಸಾಲದ ಮೊತ್ತವೆಷ್ಟು?

ಇ) ಆ ಸಹಕಾರ ಸಂಸ್ಥೆಯವರು 1990-91ರವರೆಗೆ ಗಳಿಸಿರುವ ಲಾಭ ಮತ್ತು ನಷ್ಟವೆಷ್ಟು? ಕಳೆದ ಮೂರು ವರ್ಷಗಳ ಮಾಹಿತಿಯನ್ನು ನೀಡುವುದು.

ಈ) ಈ ಸಂಸ್ಥೆಯು ನಷ್ಟವನ್ನು ಅನುಭವಿಸಿದ್ದಕ್ಕೆ ಕಾರಣಗಳೇನು?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ರೂ. 17,88,780-84.

ಆ) ರೂ 5,20,666-00.

ಇ) 1990-91ರ ಅಂತ್ಯಕ್ಕೆ ಕ್ರೋಢೀಕೃತ ನಷ್ಟ ರೂ 16.53 ಲಕ್ಷಗಳು. ಸಂಘವು ಕಳೆದ ಮೂರು ವರ್ಷಗಳಲ್ಲಿ ಗಳಿಸಿದ ಲಾಭ ಕೆಳಗೆ ಕಂಡಂತೆ ಇರುತ್ತದೆ.

1988-89 ರೂ.1.62. ಲಕ್ಷಗಳು.

1989-90 ರೂ. 0.45 ಲಕ್ಷಗಳು.

1990-91 ರೂ.1.09 ಲಕ್ಷಗಳು.

ಈ) ಸಂಘವು ನಷ್ಟ ಹೊಂದಲು ಕಾರಣಗಳು ಈ ಕೆಳಕಂಡಂತಿವೆ:

1. ಸಂಘವು ತನ್ನ ಸಂಪನ್ಮೂಲಗಳನ್ನು ಕಟ್ಟಡ ಕಟ್ಟಲು ಉಪಯೋಗಿಸಿಕೊಂಡಿದ್ದರಿಂದ ವ್ಯಾಪಾರದ ವಹಿವಾಟಿಗೆ ಬಂಡವಾಳದ ಕೊರತೆ.

2. ಜಿಲ್ಲಾ ಕೇಂದ್ರ ಬ್ಯಾಂಕಿನಿಂದ ಪಡೆದ ನಗದು ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡದೆ ಇರುವುದರಿಂದ ಹೆಚ್ಚು ಬಡ್ಡಿ ಕೊಡಬೇಕಾದ್ದು.

3. ಸದಸ್ಯರಿಗೆ ಮಾಲುಗಳನ್ನು ಸಾಲದ ರೂಪದಲ್ಲಿ ಕೊಟ್ಟಿದ್ದು ಸಕಾಲದಲ್ಲಿ ವಸೂಲಿಯಾಗದೆ ಹೋಗಿರುವುದು.

4. ಸಂಘದ ನೌಕರರಿಂದ ಮಾಲು ಕೊರತೆ ಬಾಬ್ತು ವಸೂಲಾಗದೆ ಇದ್ದುದು.

ದಕ್ಷಿಣ ಕನ್ನಡ ಜಿಲ್ಲೆಯ ನ್ಯಾಯ ಬೆಲೆಯ ಅಂಗಡಿಗಳು

51 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1991ನೇ ಡಿಸಂಬರ್ ಅಖೈರುವರೆಗೆ ಇರುವ ನ್ಯಾಯ ಬೆಲೆ ಅಂಗಡಿಗಳೆಷ್ಟು?

ಆ) ಈ ಪೈಕಿ ಖಾಸಗಿಯವರ ಹಾಗೂ ಸಹಕಾರಿ ಸಂಘ ಸಂಸ್ಥೆಗಳದ್ದು ಎಷ್ಟು?

ಇ) ಈ ನ್ಯಾಯ ಬೆಲೆ ಅಂಗಡಿಗಳಲ್ಲಿ ವಂಚನೆ ಗ್ರಾಹಕರಿಗೆ ಮೋಸ ಮಾಡಿದ ಪ್ರಕರಣಗಳು ಇವೆಯೇ?

ಈ) ಇದ್ದಲ್ಲಿ ಅವುಗಳ ಬಗ್ಗೆ ತೆಗೆದುಕೊಂಡ ಕಾರ್ಯಕ್ರಮಗಳೇನು?

ಉ) ಗ್ರಾಹಕರ ಹಿತಕ್ಕಾಗಿ ಆಗಾಗ್ಗೆ ಬಿಗುವಿನ ತಪಾಸಣೆ ತನಿಖೆ ಮಾಡಲಾಕುತ್ತಿದೆಯೇ?

ಊ) ಖಾಸಗಿ ವ್ಯಾಪಾರಿಗಳು ಆಹಾರ ಧಾನ್ಯ ಇನ್ನಿತರ ಗ್ರಾಹಕರ ಸಾಮಾಗ್ರಿಗಳನ್ನು ದಾಸ್ತಾನಿನಲ್ಲಿಟ್ಟು ಕಾಳಸಂತೆಯಲ್ಲಿ ಮಾರದಂತೆ ಅತ್ಯಂತ ಬಿಗುವಿನ ತಪಾಸಣೆ ನಡೆಸುವ ಕ್ರಮಗಳನ್ನು ಸರ್ಕಾರ ಕ್ರಮ ಕೈಗೊಂಡಿದೆಯೇ?

ಋ) ಕೈಗೊಂಡಿದ್ದಲ್ಲಿ ಅದು ಫಲಕಾರಿ ಯಾಗಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 881

ಆ) ವಿವರಗಳು ಕೆಳಕಂಡಂತೆ ಇದೆ

1. ಖಾಸಗಿಯವರು 280